ಮೂಲ ದಾವಾ ನಂಃ 12/2020

ಡಿ.ಡಬ್ಲ್ಯೂಃ 01

( ಇಂದು ದಿನಾಂಕಃ 17.03.2025 ರಂದು ಡಿ. ಡಬ್ಲು 1 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ವಾದಿಯರ ಪರ ವಕೀಲರಾದ ಶ್ರೀ ಆರ್. ವಿ. ಬಿ. ರವರಿಂದಃ**

ನಾನು 9 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಈ ದಾವೆಯ ಆಸ್ತಿಗಳೆಲ್ಲವೂ ನಿಮ್ಮ ಕುಟುಂಬದ ಆಸ್ತಿಗಳಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಮೂಲತಃ ಕೋಯರ್ ವಾಗಳೆಕರ್ ರವರಿಗೆ ಸೇರಿದ ಆಸ್ತಿಗಳು ಎಂದರೆ ಸಾಕ್ಷಿ ಸದ್ರಿ ಆಸ್ತಿಗಳು ಪುಂಡಲಿಕ ವಾಗಳೇಕರ್ ರವರಿಗೆ ಸೇರಿದ ಆಸ್ತಿಗಳು ಅಂತಾ ಉತ್ತರಿಸುತ್ತಾರೆ. ಪುಂಡಲಿಕ ವಾಗಳೇಕರ್ ರವರಿಗೆ ದಾವಾ ಆಸ್ತಿಗಳು ಹೇಗೆ ಬಂದವು ಎಂದರೆ ಸಾಕ್ಷಿ ಟ್ರಿಬ್ಯೂನಲ್ ನಿಂದ ಬಂದ ಆಸ್ತಿಗಳು ಅಂತಾ ಉತ್ತರಿಸುತ್ತಾರೆ. ಟ್ರಿಬ್ಯೂನಲ್ ಮುಂದೆ ಅರ್ಜಿ ಸಲ್ಲಿಸಬೇಕಾದರೆ ಅವರು ರೈತರಾಗಿರಬೇಕು ಎಂದರೆ ಸರಿ. ಪುಂಡಲಿಕ ವಾಗಳೇಕರ್ ರವರ ತಂದೆಯ ಹೆಸರು ಕೋಯರ್ ವಾಗಳೇಕರ್ ಎಂದರೆ ಸರಿ. ಕೋಯರ್ ವಾಗಳೇಕರ್ ರವರು ದಾವಾ ಆಸ್ತಿಗಳ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನೀವು ಕೋಯರ್ ವಾಗಳೇಕರ್ ರವರನ್ನು ಎಂದಾದರೂ ನೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಅಂತಾ ಉತ್ತರಿಸುತ್ತಾರೆ. ಕೋಯರ್ ವಾಗಳೇಕರ್ ರವರ ಹೆಂಡತಿಯ ಹೆಸರು ಉಬ್ಜಾ ಎಂದರೆ ಸಾಕ್ಷಿ ನಾನು ಕೇಳಿಲ್ಲ ಅಂತಾ ಉತ್ತರಿಸುತ್ತಾರೆ. ಸದ್ರಿ ಉಬ್ಜಾ ವಾಗಳೇಕರ್ ರವರಿಗೆ ಪುಂಡಲೀಕ ಮತ್ತು ದೇವಕಿ ಎಂಬ ಮಕ್ಕಳಿದ್ದರು ಎಂದರೆ ಸಾಕ್ಷಿ ಪುಂಡಲೀಕ ಎಂಬ ಮಗ ಇರುವುದು ಮಾತ್ರ ನನಗೆ ಗೊತ್ತಿದೆ ಅಂತಾ ಉತ್ತರಿಸುತ್ತಾರೆ. ನಾನು 1968 ರಲ್ಲಿ ಜನಿಸಿರುತ್ತೇನೆ. 1968 ರ ಹಿಂದಿನ ವಿಷಯ ಅಂದರೆ ಕೋಯರ್ ಹಾಗೂ ಉಬ್ಜಾ ರವರಿಗೆ ಎಷ್ಟು ಮಕ್ಕಳಿದ್ದರು ಎಂಬ ಬಗ್ಗೆ ನಿಮಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ.

2. ಪುಂಡಲೀಕ ವಾಗಳೇಕರ್ ರವರಿಗೆ 7 ಮಂದಿ ಮಕ್ಕಳಿದ್ದರು. ದಾವಾ ಆಸ್ತಿಗಳು ನಿಮಗೆ ಹೇಗೆ ಬಂದವು ಎಂದರೆ ಸಾಕ್ಷಿ ಲಲಿತ ವಾಗಳೇಕರ್ ರವರು ಬ್ಯಾಗಿನಲ್ಲಿ ಒಂದು ದಾಖಲೆ ಇದೆ ನೋಡು ಅಂತಾ ಹೇಳಿದ್ದರು ಅಂತಾ ಉತ್ತರಿಸುತ್ತಾರೆ. ಯಾವಾಗ ಅವರು ಆ ರೀತಿ ಹೇಳಿದ್ದರು ಎಂದರೆ ಸಾಕ್ಷಿ 2018 ರಲ್ಲಿ ಹೇಳಿದ್ದರು ಅಂತಾ ಉತ್ತರಿಸುತ್ತಾರೆ. 2018 ರಲ್ಲಿ ದಾವಾ ಆಸ್ತಿಗಳೆಲ್ಲವೂ ಪುಂಡಲೀಕ ವಾಗಳೇಕರ್ ರವರ ಹೆಂಡತಿ ದೇವಕಿ ಪುಂಡಲೀಕ ವಾಗಳೇಕರ್ ರವರ ಹೆಸರಿನಲ್ಲಿದ್ದವು

ಎಂದರೆ ಸರಿ. ದೇವಕಿ ಪುಂಡಲೀಕ ವಾಗಳೇಕರ್ ರವರ ಹೆಸರಿನಲ್ಲಿದ್ದ ಆಸ್ತಿಗಳನ್ನು ಲಲಿತ ಪುಂಡಲೀಕ ವಾಗಳೇಕರ್ ರವರ ಹೆಸರಿಗೆ ನಾನೇ ಮುಂದೆ ನಿಂತು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಅದನ್ನು ನಾನು ಉಲ್ಲಾಸ ಈರು ನಾಯ್ಕರವರ ಮುಖಾಂತರ ಮಾಡಿಸಿಕೊಂಡಿರುತ್ತೇನೆ ಅಂತಾ ಉತ್ತರಿಸುತ್ತಾರೆ. ಸದ್ರಿ ಉಲ್ಲಾಸ ಈರು ನಾಯ್ಕ ರವರಿಗೆ 60 ವರ್ಷ ಆಗಿರುತ್ತದೆ. ಅವರು ಅಂಚೆ ಕಛೇರಿಯಲ್ಲಿ ಕೆಲಸ ಮಾಡುತ್ತಾರೆ. ಅವರು ನನ್ನ ಸ್ನೇಹಿತರು ಎಂದರೆ ಸಾಕ್ಷಿ ಪಕ್ಕದ ಮನೆಯವರು ಅಂತಾ ಉತ್ತರಿಸುತ್ತಾರೆ.

3. ನಿಡಿ. 47ರ ದಾಖಲೆಯನ್ನು ನಿಮಗೆ ಯಾರು ಕೊಟ್ಟರು ಎಂದರೆ ಸಾಕ್ಷಿ ಲಲಿತಾ ವಾಗಳೇಕರ್ ರವರು ತನ್ನ ಬ್ಯಾಗಿನಲ್ಲಿ ಇದ್ದ ದಾಖಲೆಯನ್ನು ನೀನು ತೆಗೆದುಕೊ ಅಂತಾ ಹೇಳಿದ್ದರಿಂದ ನಾನು ತೆಗೆದುಕೊಂಡು ಹಾಜರುಪಡಿಸಿರುತ್ತೇನೆ ಅಂತಾ ಉತ್ತರಿಸುತ್ತಾರೆ. ಆ ರೀತಿ ಅವರು ಯಾವಾಗ ಹೇಳಿದ್ದರು ಎಂದರೆ ಸಾಕ್ಷಿ 2018 ರಲ್ಲಿ ಹೇಳಿದ್ದು ದಿನಾಂಕ, ತಿಂಗಳು ನನಗೆ ಗೊತ್ತಿಲ್ಲ ಅಂತಾ ಉತ್ತರಿಸುತ್ತಾರೆ. ಸದ್ರಿ ಲಲಿತಾ ವಾಗಳೇಕರ್ ರವರು ಜೀವಂತ ಇರುವಾಗಲೇ ನನಗೆ ಅದನ್ನು ತೆಗೆದುಕೊ ಅಂತಾ ಹೇಳಿದ್ದರು ಮತ್ತು ನಾನು ಅವರು ಜೀವಂತ ಇರುವಾಗಲೇ ಸದ್ರಿ ದಾಖಲೆಯನ್ನು ಅವರ ಬ್ಯಾಗಿನಿಂದ ತೆಗೆದುಕೊಂಡಿದ್ದೆ. ನನ್ನ ಪ್ರಕಾರ ಸದ್ರಿ ದಾಖಲೆಯನ್ನು ದಿಃ 07.03.2018 ರಂದು ಮಾಡಲಾಗಿದೆ. ನಿಡಿ. 47 ಎ ರ ದಾಖಲೆಯಲ್ಲಿ ಅದರ ದಿನಾಂಕವನ್ನು 2017 ನೇ ಇಸವಿ ಮಾಹೇ ಮಾರ್ಚ ತಿಂಗಳ ತಾರೀಖು 07 ನೇ ರಲ್ಲು ಅಂತಾ ನಮೂದಿಸಲಾಗಿದೆ ಎಂದರೆ ಸರಿ. ಸದ್ರಿ ದಾಖಲೆಯಲ್ಲಿ ಸ್ಟಾಂಪ್ ಪೇಪರ್ ಖರೀದಿಸಿದ ದಿನಾಂಕವನ್ನು 07-03-2018 ಅಂತಾ ನಮೂದಿಸಲಾಗಿದೆ ಎಂದರೆ ಸರಿ. ನಿಡಿ. 47ರ ದಾಖಲೆಗೆ ನಾನು ಪ್ರೊಬೇಟ್ ವಗೈರೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿ. ನಿಡಿ. 47ರ ದಾಖಲೆಯ ಆಧಾರದಲ್ಲಿ ನನ್ನ ಹೆಸರಿಗೆ ಪಹಣಿ ಪತ್ರಿಕೆಯನ್ನು ಬದಲಾಯಿಸಿಕೊಳ್ಳುವಾಗ ಈ ದಾವೆಯ ಯಾವದೇ ವಾದಿಯರಿಗೆ ಕಂದಾಯ ಅಧಿಕಾರಿಗಳಿಂದ ನೋಟಿಸು ವಗೈರೆ ನೀಡಿರುವುದಿಲ್ಲ ಎಂದರೆ ಸಾಕ್ಷಿ ನಾನು ಅವರನ್ನು ಗುರುತಿಸುವುದಿಲ್ಲ ಅಂತಾ ಉತ್ತರಿಸುತ್ತಾರೆ. ನಿಡಿ. 47ರ ಮೃತ್ಯುಪತ್ರವನ್ನು ನನ್ನ ಹೆಸರಿಗೆ ಬರೆದಿಡಲಾಗಿದೆ ಎಂಬ ವಿಷಯವನ್ನು ಯಾವದೇ ದಿನಪತ್ರಿಕೆಯಲ್ಲಿ ಸಾರ್ವಜನಿಕ ತಿಳುವಳಿಕೆಗಾಗಿ ಪ್ರಕಟಿಸಿರುವುದಿಲ್ಲ ಎಂದರೆ ಸರಿ.

4. ನಿಡಿ. 47 ರ ಬರಹಗಾರರು ಯಾರು ಎಂಬುದು ನನಗೆ ಗೊತ್ತಿಲ್ಲ. ನಿಡಿ. 47 ರಲ್ಲಿ ಅದನ್ನು ಬರೆದಿರುವ ಬರಹಗಾರರು ಯಾರು ಎಂಬ ಬಗ್ಗೆ ಸಹಿ ಹಾಗೂ ಸೀಲು ಇರುವುದಿಲ್ಲ ಎಂದರೆ ಸರಿ. ದಿಃ 07.03.2018 ರಂದು ನಿಡಿ. 47 ಕ್ಕೆ ಸ್ಟಾಂಪ್ ಪೇಪರನ್ನು ನಾನೇ ಖರೀದಿಸಿದ್ದೇನೆ ಎಂದರೆ ಸರಿ. ನಿಡಿ. 47 ಎ ರಲ್ಲಿ ಶ್ರೀ ಕೆ.ಟಿ. ಭೂತೆ ನೋಟರಿಯವರ ಬಳಿ

ನಾನೇ ದೃಡೀಕರಿಸಿಕೊಂಡಿದ್ದೇನೆ ಎಂದರೆ ಸರಿ. ಶ್ರೀ ಕಿರಣ ನಾಯ್ಕ ಮತ್ತು ಉಲ್ಲಾಸ ನಾಯ್ಕ ಎಂಬವರು ನನ್ನ ಪರಿಚಯದವರು ಹಾಗೂ ನನ್ನ ನೆರೆಮನೆಯವರು ಎಂದರೆ ಸರಿ.

5. ಲಲಿತಾ ವಾಗಳೇಕರ್ ರವರನ್ನು ನೀವು ಎಂದಿನಿಂದ ಪರಿಚಯಿಸುತ್ತೀರಿ ಎಂದರೆ ಸಾಕ್ಷಿ ನಾನು ಚಿಕ್ಕವನಿದ್ದಾಗಿನಿಂದಲೇ ಅವರು ನನಗೆ ಪರಿಚಯ ಅಂತಾ ಉತ್ತರಿಸುತ್ತಾರೆ. ಸದ್ರಿ ಲಲಿತಾ ಪುಂಡಲಿಕ ವಾಗಳೇಕರ್ ರವರು ಮಾನಸಿಕವಾಗಿ ಅಸ್ವಸ್ಥರಾಗಿದ್ದರು ಎಂದರೆ ಸರಿಯಲ್ಲ. ಅವರು ಯಾವಾಗಲೂ ರಸ್ತೆಯ ಮೇಲೆ ತಿರುಗಾಡುತ್ತಲೇ ಇದ್ದರು ಎಂದರೆ ಸರಿಯಲ್ಲ. ಪುಂಡಲಿಕ ವಾಗಳೇಕರ್ ರವರ ಕುಟುಂಬದಲ್ಲಿ ಮಾನಸಿಕ ಖಾಯಿಲೆಯ ಹಿನ್ನೆಲೆ ಇತ್ತು ಎಂದರೆ ಸರಿಯಲ್ಲ.

6. ನನ್ನ ತಂದೆಯವರ ಕಡೆ 6 ಗುಂಟೆ ಜಮೀನು ಇದೆ. ನನ್ನ ತಂದೆಯವರಿಗೆ 6 ಮಂದಿ ಮಕ್ಕಳು. ನಾಲ್ಕು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು. ನನ್ನ ಸಹೋದರರಲ್ಲಿ ಇಬ್ಬರು ಗೋವಾದಲ್ಲಿ ಇದ್ದಾರೆ, ನನ್ನ ಸಹೋದರಿಯರು ಮುಂಬೈನಲ್ಲಿ ವಾಸವಿರುತ್ತಾರೆ. ಈಗ ನನ್ನ ತಂದೆ ಜೀವಂತ ಇರುವುದಿಲ್ಲ. ಅವರ ಹೆಸರಿನಲ್ಲಿದ್ದ ಜಮೀನುಗಳು ಈಗ ನನ್ನ ಹೆಸರಿಗೆ ಬಂದಿವೆ. ನನ್ನ ತಂದೆಯವರ ಮನೆ ಹೊಸಾಳಿಯಲ್ಲಿದೆ. ಅದರ ಮನೆ ನಂಬ್ರ ನನಗೆ ಗೊತ್ತಿಲ್ಲ. ಲಲಿತಾ ವಾಗಳೇಕರ್ ರವರ ಸಹೋದರ ಸಹೋದರಿಯರು ಒಂದೇ ಕಡೆ ಇದ್ದರು ಎಂದರೆ ಸರಿ.

7. ಲಲಿತಾ ವಾಗಳೇಕರ್ ರವರ ಮನೆಯಲ್ಲಿ ಜರುಗುವ ಎಲ್ಲಾ ದೇವತಾ ಕಾರ್ಯಗಳಿಗೆ ವಾದಿಯರು ಹೋಗುತ್ತಿದ್ದರು ಎಂದರೆ ಸಾಕ್ಷಿ ನಾವು ಸಹಾ ಹೋಗುತ್ತಿದ್ದೆವು ಅಂತಾ ಉತ್ತರಿಸುತ್ತಾರೆ. ನಾನು ಲಲಿತಾ ವಾಗಳೇಕರ್ ರವರಿಗೆ ಸಂಬಂಧಿಕ ಅಂತಾ ತೋರಿಸಲು ಯಾವದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನೀವು ಲಲಿತಾ ವಾಗಳೇಕರ್ ರವರಿಗೆ ಹೇಗೆ ಸಂಬಂಧಿಕರು ಅಂತಾ ಬಿಡಿಸಿ ಹೇಳಬಹುದೇ ಎಂದರೆ ಸಾಕ್ಷಿ ಅವರು ನನ್ನ ಸಹೋದರಿ ಅಂತಾ ಉತ್ತರಿಸುತ್ತಾರೆ. ನೀವು ಲಲಿತಾ ವಾಗಳೇಕರ್ ರವರ ಸಂಬಂಧಿಕರಲ್ಲದೇ ಇದ್ದರೂ ಸಹಾ ಸಹೋದರಿ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ಲಲಿತಾ ವಾಗಳೇಕರ್ ರವರು ಯಾವತ್ತೂ ಸಹಾ ನನ್ನ ಹೆಸರಿಗೆ ಯಾವದೇ ವೀಲುನಾಮೆ ಯಾ ಇತರ ದಾಖಲೆಯನ್ನು ಬರೆದಿಟ್ಟಿರುವುದು ಇರುವುದಿಲ್ಲ ಎಂದರೆ ಸರಿಯಲ್ಲ. ಸದ್ರಿ ಲಲಿತಾ ವಾಗಳೇಕರ್ ರವರು

ವೀಲುನಾಮೆಯನ್ನು ಬರೆದಿಡಲು ಮಾನಸಿಕವಾಗಿ ಸ್ವಸ್ಥರಾಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಅವರ ಆಸ್ತಿಯನ್ನು ಲಪಟಾಯಿಸಬೇಕು ಎಂಬ ಉದ್ದೇಶದಿಂದ ನಿಡಿ. 47 ಮತ್ತು ನಿಡಿ. 47 ಎ ರ ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದ್ದು, ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಕಾರವಾರ.